# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 291

ಸದಸ್ಯರ ಹೆಸರು : ಶ್ರೀ ಐವನ್ ಡಿ' ಸೋಜಾ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮಜರಾಯಿ ಸಚಿವರು

ಉತ್ತರಿಸುವ ದಿನಾಂಕ : 11.12.2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಿಂದ-ಮೂಡಬಿದ್ರೆ ಮಾರ್ಗದಲ್ಲಿ ಸರ್ಕಾರಿ ಬಸ್ಸುಗಳ ಸೌಕರ್ಯ ಒದಗಿಸಬೇಕೆಂದು ಬೇಡಿಕೆ ಇದ್ದರೂ ಯಾವುದೇ ಬಸ್ಸುಗಳನ್ನು ಓಡಿಸದೇ ಇರಲು ಕಾರಣಗಳೇನು; ಸರ್ಕಾರವು ಬಸ್‌ಗಳ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳುವುದೇ; | ಮಂಗಳೂರು ವಿಭಾಗದ ಮೂಡಬಿದ್ರೆಗೆ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ಜನ ಪ್ರತಿನಿಧಿಗಳು / ಸಾರ್ವಜನಿಕರು / ವಿದ್ಯಾರ್ಥಿಗಳಿಂದ ಹಲವು ವರ್ಷಗಳಿಂದ ಬೇಡಿಕೆಯಿದ್ದು, ಈ ಸಂಬಂಧ ಮಂಗಳೂರು-ಮೂಡುಬಿದ್ರೆ-ಕಾರ್ಕಳ ಮಾರ್ಗದಲ್ಲಿ 08 ಪರವಾನಗಿಗಳ ಮಂಜೂರಾತಿ ಕೋರಿ 2017ರಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು, ಇವರಲ್ಲಿ ಅರ್ಜಿ ಸಲ್ಲಿಸಿದ್ದು, ಅದರಂತೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಇವರಿಂದ ದಿನಾಂಕ:31.10.2017 ರಂದು ಮಂಗಳೂರು-ಮೂಡಬಿದ್ರೆ ಮಾರ್ಗದಲ್ಲಿ 08 ಪರವಾನಗಿಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದವರಿಗೆ ಮಂಜೂರಾತಿ ನೀಡಲಾಗಿರುತ್ತದೆ.<br><br>ಆದರೆ, ಸದರಿ ಮಂಜೂರಾತಿಯನ್ನು ಪ್ರಶ್ನಿಸಿ ಶ್ರೀ ಕೆ.ರಾಜವರ್ಮ ಬಲ್ಲಾಳ್ ಮತ್ತು ಇತರರು ಕರ್ನಾಟಕ ರಾಜ್ಯ ಸಾರಿಗೆ ಮೇಲ್ಮನವಿ ಪ್ರಾಧಿಕಾರದಲ್ಲಿ ಪರಿಷ್ಕರಣಾ ಅರ್ಜಿ ಸಂಖ್ಯೆ: 164/2017, 165/2017, 166/2017, 167/2017, 168/2017, 169/2017, 170/2017 ಮತ್ತು 171/2017ರಲ್ಲಿ ಪ್ರಕರಣವನ್ನು ದಾಖಲಿಸಲಾಗಿದ್ದು, ಮಾನ್ಯ ನ್ಯಾಯಾಲಯವು ಸದರಿ ಪರಿಷ್ಕರಣಾ ಅರ್ಜಿಗಳ ಪ್ರಕರಣಗಳಿಗೆ ದಿನಾಂಕ: 31-10-2017ರಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ರವರು ಮಂಜೂರು ಮಾಡಿರುವ ಆದೇಶವನ್ನು ರದ್ದುಪಡಿಸಿ ಪ್ರಕರಣವನ್ನು ಪುನ: ಕಾನೂನಾತ್ಮಕವಾಗಿ ವಿಚಾರಣೆ ಮಾಡಿ ಆದೇಶ ಹೊರಡಿಸಲು ಸೂಚಿಸಲಾಗಿರುತ್ತದೆ |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | ಮುಂದುವರೆದು, ಗುರುಪುರ ಸೇತುವೆ ಮೇಲೆ ಸಾರಿಗೆಗಳ ಕಾರ್ಯಾಚರಣೆ ಸುರಕ್ಷತೆಗೆ ಸಂಬಂಧಿಸಿದಂತೆ ಖಾಸಗಿಯವರು ದಾವೆ ಹೂಡಿರುವುದರಿಂದ, 2020ರಲ್ಲಿ ಗುರುಪುರ ಹಳೆ ಸೇತುವೆ ಬದಲಾಗಿ ಹೊಸ ಸೇತುವೆಯನ್ನು ಲೋಕಾರ್ಪಣೆ ಮುಂತಾದ ಕಾರಣಗಳಿಂದ ಪರವಾನಗಿಗಳು ಮಂಜೂರಾಗಿರುವುದಿಲ್ಲ. ಈ ಸಂಬಂಧ ದಿನಾಂಕ: 05.11.2024 ರಂದು ಸಭೆ ನಡೆಸಲಾಗಿದ್ದು, ಅಧ್ಯಕ್ಷರು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಇವರಿಗೆ ಆಕ್ಷೇಪಣೆಯನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ.<br><br>ಮುಂದುವರೆದು, ದಿನಾಂಕ:07.01.2022 ರಂದು ಸ್ಟೇಟ್ ಬ್ಯಾಂಕ್ ಮೂಡುಬಿದ್ರೆ ವಯಾ ಜ್ಯೋತಿ-ಬಂಟ್ಸ್ ಹಾಸ್ಟೆಲ್, ಗುರುಪುರ-ಕೈಕಂಬ ಮಾರ್ಗದಲ್ಲಿ 04 ಬಸ್‌ಗಳಿಂದ 28 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲು ಸಮಗ್ರ ಪ್ರದೇಶ ಯೋಜನೆಯಡಿಯಲ್ಲಿ (ಏರಿಯಾಸ್ಕೀಂ) ಪರವಾನಗಿ ಕೋರಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು, ಇವರಲ್ಲಿ ಹಾಗೂ ದಿನಾಂಕ:18.11.2021ರಂದು ಇದೇ ಮಾರ್ಗದಲ್ಲಿ 04 ಬಸ್‌ಗಳಿಂದ 40 ಸುತ್ತುವಳಿಗಳನ್ನು ಕಾರ್ಯಾಚರಣೆಗೊಳಿಸಲು ಪರವಾನಗಿ ಕೋರಿ ರಾಜ್ಯ ಸಾರಿಗೆ ಪ್ರಾಧಿಕಾರ, ಬೆಂಗಳೂರಿನಲ್ಲಿ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ.<br><br>ಅಲ್ಲದೇ, ಸದರಿ ಮಾರ್ಗದಲ್ಲಿ ತಾತ್ಕಾಲಿಕ ಪರವಾನಿಗೆ ಕೋರಿ ದಿನಾಂಕ:21.07.2023 ರಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಇಲ್ಲಿ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ.<br><br>ಈ ಎಲ್ಲಾ ಅರ್ಜಿಗಳು ಮಂಜೂರಾತಿಗೆ ಬಾಕಿಯಿದ್ದು, ಸದರಿ ಪ್ರಕರಣಗಳನ್ನು ದಿನಾಂಕ:05.11.2024 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲಾಗಿದೆ. ಪ್ರಾಧಿಕಾರದ ಅಧ್ಯಕ್ಷರು ಆಕ್ಷೇಪಣೆಯನ್ನು ಸಲ್ಲಿಸಲು 15 ದಿವಸಗಳ ಕಾಲಾವಕಾಶವನ್ನು ನೀಡಿರುತ್ತಾರೆ. ಸದರಿ ಪ್ರಕರಣವು ಅರೆ ನ್ಯಾಯಿಕ ಪ್ರಾಧಿಕಾರದಲ್ಲಿರುವುದರಿಂದ (Quasi Judicial) ಪ್ರಾಧಿಕಾರದ ಅಧ್ಯಕ್ಷರು ನಿರ್ಣಯ ಕೈಗೊಳ್ಳಬೇಕಾಗಿರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ. | ಸರ್ಕಾರದ ಯೋಜನೆಯ ಶಕ್ತಿ ಯೋಜನೆ ಅನ್ವಯ ಫಲಾನುಭವಿಗಳಿಗೆ ಬಸ್ ಸೌಕರ್ಯ ಇಲ್ಲದೇ ಇರುವುದರಿಂದ ಈ ಯೋಜನೆಯಿಂದ ವಂಚಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ. | ಸಾರ್ವಜನಿಕರು/ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಂಗಳೂರು ವಿಭಾಗದ ವತಿಯಿಂದ 40 ನಗರ ಸಾರಿಗೆ ಅನುಸೂಚಿಗಳಿಂದ 411 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಸರ್ಕಾರದ ಯೋಜನೆಯ ಶಕ್ತಿಯೋಜನೆ ಜಾರಿಗೆ ಬಂದ ನಂತರ ಹೆಚ್ಚಿನ/ಹೊಸ ಮಾರ್ಗಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ಬೇಡಿಕೆಗಳು ಬಂದಿರುತ್ತವೆ. ಪ್ರಸ್ತುತ ಮಂಗಳೂರು ನಗರದಲ್ಲಿ ಮಾನ್ಯ ಜಿಲ್ಲಾಧಿಕಾರಿಯವರ ಇವರ ಅಧಿಸೂಚನೆ ಸಂಖ್ಯೆ: ಆರ್‌ಟಿಎ/ ಸಿಆರ್/ 65/ 2013-14/ 112800, ದಿನಾಂಕ: 11-09-2013ರನ್ವಯ ಸರ್ಕಾರಿ ಮತ್ತು ಖಾಸಗಿ ಬಸ್‌ಗಳಿಗೆ ದಿನಾಂಕ: 05-01-1991 ಮತ್ತು 06-04-1993ಗಳಲ್ಲಿ ನೀಡಲಾಗಿರುವ ನಗರ ಸಾರಿಗೆ ಹಾಗೂ ಗ್ರಾಮಾಂತರ ಬಸ್‌ಗಳಿಗೆ ಮಾತ್ರ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಸಂಚರಿಸಲು ಅನುಮತಿ ನೀಡಲಾಗಿರುತ್ತದೆ.<br><br>ಸದರಿ ಅಧಿಸೂಚನೆಗೆ ವಿನಾಯಿತಿ ನೀಡಿ ನಗರ ಪ್ರದೇಶಗಳಿಗೆ ಪರವಾನಗಿ ನೀಡುವಂತೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ದಿನಾಂಕ:08.08.2024ರಂದು ಕ.ರಾ.ರ.ಸಾ.ನಿಗಮವು ಮನವಿಯನ್ನು ಸಲ್ಲಿಸಲಾಗಿರುತ್ತದೆ ಹಾಗೂ ಮಂಗಳೂರು ನಗರ/ ಗ್ರಾಮೀಣ ಪ್ರದೇಶಗಳಿಗೆ ಹೊಸದಾಗಿ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ಬೇಡಿಕೆಯಿರುವ 40 ಮಾರ್ಗಗಳಿಗೆ (ತಡೆಯಾಜ್ಞೆ ಇರುವ 12 ನರ್ಮ್ ಮಾರ್ಗಗಳು ಸೇರಿ) ಪರವಾನಗಿ ಕೋರಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು, ಇವರಲ್ಲಿ ಸಮಗ್ರ ಪ್ರದೇಶ ಯೋಜನೆಯಡಿಯಲ್ಲಿ ಅರ್ಜಿ ಸಲ್ಲಿಸಲಾಗಿರುತ್ತದೆ. ಈ ಎಲ್ಲಾ ಅರ್ಜಿಗಳು ಮಂಜೂರಾತಿಗೆ ಪರಿಶೀಲನೆಯಲ್ಲಿರುತ್ತವೆ.<br><br>ಅಲ್ಲದೆ, ಮೋಟಾರು ವಾಹನ ಕಾಯ್ದೆ 1988ರ, ಕಲಂ 117 ಮತ್ತು ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 228 ಎ(6)ರನ್ವಯ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯೊಳಗೆ ಸಂಚರಿಸುವ ಇತರೆ ಬಸ್‌ಗಳಿಗೆ ಈ |
| ಇ. | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಸರ್ಕಾರಿ ಬಸ್‌ಗಳಿಗೆ ಅನುಮತಿ ಇದ್ದರೂ, ಖಾಸಗಿ ಬಸ್‌ಗಳ ಜೊತೆ ಹೊಂದಾಣಿಕೆ ಮಾಡಿಕೊಂಡಿರುವುದರಿಂದ ಶಕ್ತಿ ಯೋಜನೆಗಳ ಫಲಾನುಭವಿಗಳು ಈ ಯೋಜನೆಯಿಂದ ವಂಚಿತರಾಗಿದ್ದು, ಈ ಕೊರತೆ ನೀಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಕೆಳಕಂಡ ಸ್ಥಳಗಳಲ್ಲಿ ಬಸ್‌ಗಳನ್ನು ನಿಲುಗಡೆಗೊಳಿಸಲು ಸಹ ಆದೇಶಿಸಲಾಗಿರುತ್ತದೆ:<br>1. ಮರವೂರು, ಬೋಂದೇಲ್, ಕೆ.ಪಿ.ಟಿ ಕಡೆಯಿಂದ ಬರುವ ನಗರ ಸಾರಿಗೆ ಬಸ್‌ಗಳ ಕೆ.ಪಿ.ಡಿ. ತನಕ ಬಂದು ಕೆ.ಪಿ.ಟಿ ಸಮೀಪ ನಿಲುಗಡೆಯಾಗುವುದು.<br>2. ಗುರುಪುರ, ಕುಲಶೇಖರ ಕಡೆಯಿಂದ ಬರುವ ನಗರ ಸಾರಿಗೆ ಬಸ್‌ಗಳು ಮಲ್ಲಿಕಟ್ಟೆ ತನಕ ಬಂದು ಮಲ್ಲಿಕಟ್ಟೆ ಸ್ಥಾನದಲ್ಲಿ ನಿಲುಗಡೆಯಾಗುವುದು.<br>3. ತಲಪಾಡಿ, ಉಳ್ಳಾಲ, ಕೋಣಾಜೆ, ತೊಕ್ಕೋಟ್ಟು, ಪಡೀಲ್ ಮತ್ತು ನಾಗುರಿ ಕಡೆಯಿಂದ ಬರುವ ನಗರ ಸಾರಿಗೆ ಬಸ್‌ಗಳು ಕಂಕನಾಡಿ ತನಕ ಬಂದು ಕಂಕನಾಡಿಯಲ್ಲಿ ನಿಲುಗಡೆಯಾಗುವುದು.<br>4. ಸುರತ್ಕಲ್, ಕೂಳೂರು, ಕೊಟ್ಟಾರ, ಉರ್ವಸ್ಟೋರ್‌ಮತ್ತು ಉರ್ವಮಾರ್ಕೆಟ್ ಕಡೆಯಿಂದ ಬರುವ ನಗರ ಸಾರಿಗೆ ಬಸ್‌ಗಳು ಲೇಡಿಹಿಲ್ ತನಕ ಬಂದು ಲೇಡಿಹಿಲ್ ಸರ್ಕಲ್ ನಿಲುಗಡೆ ಸ್ಥಾನದಲ್ಲಿ ನಿಲುಗಡೆಯಾಗುವುದು. |
| ಈ. | ನಗರ ಸಂಚಾರದಲ್ಲಿ ಸರ್ಕಾರಿ ಮತ್ತು ಖಾಸಗಿ ಬಸ್ಸುಗಳಿಗೆ ಪ್ರತ್ಯೇಕವಾಗಿ ಬಸ್ ನಿಲ್ದಾಣ ಸ್ಥಾಪಿಸಲು ಕ್ರಮ ವಹಿಸಲಾಗುವುದೇ; (ವಿವರ ನೀಡುವುದು) | ಮಂಗಳೂರಿನಲ್ಲಿ ಸರ್ವೆಸಂಖ್ಯೆ:4/80-81ರ 03 ಎಕರೆ 24 ಗುಂಟೆ ಜಾಗದಲ್ಲಿ 1986ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನೂತನ ಬಸ್ ನಿಲ್ದಾಣವನ್ನು ಅಗತ್ಯ ಮೂಲಭೂತ ಸೌಲಭ್ಯಗಳೊಂದಿಗೆ ನಿರ್ಮಿಸಲಾಗಿರುತ್ತದೆ. ಸದರಿ ಬಸ್ ನಿಲ್ದಾಣವನ್ನು 2007-08ನೇ ಸಾಲಿನಲ್ಲಿ ರೂ.2.48 ಕೋಟಿಗಳ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಿ ಯಶಸ್ವಿಯಾಗಿ ಸರ್ಕಾರಿ ಬಸ್‌ಗಳನ್ನು ಮಾತ್ರ ಕಾರ್ಯಾಚರಣೆ ಮಾಡಲಾಗುತ್ತಿದೆ.<br>ಮಂಗಳೂರಿನ ಸ್ಟೇಟ್ ಬ್ಯಾಂಕ್‌ನಲ್ಲಿರುವ ಬಸ್ ನಿಲ್ದಾಣವು ಮಂಗಳೂರು ಮಹಾನಗರ ಪಾಲಿಕೆಯ ನಿರ್ವಹಣಾ ವ್ಯಾಪ್ತಿಗೆ ಬರುತ್ತಿದ್ದು, ಸದರಿ ಬಸ್ ನಿಲ್ದಾಣದಿಂದ ಖಾಸಗಿ ವಾಹನಗಳು ಕಾರ್ಯಾಚರಣೆಯಾಗುತ್ತಿವೆ ಮತ್ತು ನಿಗಮದ ಕೆಲವು ನಗರ ಸಾರಿಗೆ ಹಾಗೂ ಸಾಮಾನ್ಯ ಸಾರಿಗೆ ವಾಹನಗಳನ್ನು ಸಹ ಈ ಬಸ್ ನಿಲ್ದಾಣದಿಂದ ಕಾರ್ಯಾಚರಿಸಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಉ. | ಮಂಗಳೂರು ನಗರದಲ್ಲಿ ಖಾಸಗಿ ಬಸ್‌ಗಳ ಸಂಖ್ಯೆ ಎಷ್ಟು; ಸರ್ಕಾರಿ ಬಸ್‌ಗಳ ಸಂಖ್ಯೆ ಎಷ್ಟು? (ವಿವರ ನೀಡುವುದು) | ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಇವರಿಂದ ಮಂಗಳೂರು ನಗರದಲ್ಲಿ ರಹದಾರಿ ಪಡೆದ ಒಟ್ಟು 59 ಸರ್ಕಾರಿ ಹಾಗೂ ಒಟ್ಟು 979 ಖಾಸಗಿ ಪ್ರವರ್ತಕರ ಬಸ್‌ಗಳು ಸಂಚರಿಸಲಾಗುತ್ತಿದೆ. ವಿವರ ಕೆಳಕಂಡಂತಿದೆ: |

| **ಮಂಜೂರಾತಿ** | **ನಗರ** | **ಗ್ರಾಮಾಂತರ** | **ಒಟ್ಟು** |
|---|---|---|---|
| ಸರ್ಕಾರಿ | 19 | 40 | 59 |
| ಖಾಸಗಿ | 321 | 658 | 979 |
| **ಒಟ್ಟು** | **340** | **698** | **1038** |

ಸಂಖ್ಯೆ: ಟಿಡಿ 205 ಟಿಸಿಕ್ಯೂ 2024

**(ರಾಮಲಿಂಗಾರೆಡ್ಡಿ)**

ಸಾರಿಗೆ ಮತ್ತು ಮುಜರಾಯಿ ಸಚಿವರು